



(ಅವತೀರ್ಣ - ಮದೀನಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ ○

1. ಆಕಾಶಗಳಲ್ಲಿರುವ ಪ್ರತಿಯೊಂದು ವಸ್ತುವೂ ಭೂಮಿಯಲ್ಲಿರುವ ಪ್ರತಿಯೊಂದು ವಸ್ತುವೂ ಅಲ್ಲಾಹನನ್ನು ಜಪಿಸುತ್ತಿದೆ. ಅತ್ಯಂತ ಪರಿಶುದ್ಧನೂ ಪ್ರಬಲನೂ ಯುಕ್ತಿಪೂರ್ಣನೂ ಆಗಿರುವ ಸಾಮ್ರಾಟನು.

يُسَبِّحُ لِلّٰهِ مَا فِي السَّمٰوٰتِ وَمَا فِي
الْاَرْضِ الْمَلِكِ الْقُدُّوْسِ الْعَزِيْزِ
الْحَكِيْمِ ①

2. ಉಮ್ಮಿಗಳ[1] (ನಿರಕ್ಷರಿಗಳ) ನಡುವೆ ಅವರಿಂದಲೇ ಒಬ್ಬ ಸಂದೇಶ ವಾಹಕರನ್ನು ಎಬ್ಬಿಸಿದವನು ಅವನೇ. ಅವರು ಆ ಜನರಿಗೆ ಅವನ ಸೂಕ್ತಗಳನ್ನು ಓದಿ ಹೇಳುತ್ತಾರೆ, ಅವರ ಜೀವನವನ್ನು ಸಂಸ್ಕರಿಸುತ್ತಾರೆ ಮತ್ತು ಅವರಿಗೆ ಗ್ರಂಥ ಹಾಗೂ ಸದ್ವಿವೇಕದ ಶಿಕ್ಷಣ ನೀಡುತ್ತಾರೆ. ವಸ್ತುತಃ ಇದಕ್ಕಿಂತ ಮುಂಚೆ ಅವರು ಸುಸ್ಪಷ್ಟ ಪಥಭ್ರಷ್ಟತೆಯಲ್ಲಿ ಬಿದ್ದಿದ್ದರು-

هُوَ الَّذِيْ بَعَثَ فِي الْاُمِّيّٖنَ رَسُوْلًا
مِّنْهُمْ يَتْلُوْا عَلَيْهِمْ اٰيٰتِهٖ وَيُزَكِّيْهِمْ
وَيُعَلِّمُهُمُ الْكِتٰبَ وَالْحِكْمَةَ ۗ وَاِنْ
كَانُوْا مِنْ قَبْلُ لَفِيْ ضَلٰلٍ مُّبِيْنٍ ②

3. ಮತ್ತು (ಇವರ ಸಂದೇಶವಾಹಕತ್ವವು) ಅವರನ್ನಿನ್ನೂ ಭೇಟಿಯಾಗಿರದ ಇತರ ಜನರಿಗೂ ಅನ್ವಯಿಸುತ್ತದೆ.[2] ಅಲ್ಲಾಹನು ಪ್ರಬಲನೂ ಯುಕ್ತಿಪೂರ್ಣನೂ ಆಗಿರುತ್ತಾನೆ.[3]

وَّاٰخَرِيْنَ مِنْهُمْ لَمَّا يَلْحَقُوْا بِهِمْ ۭ
وَهُوَ الْعَزِيْزُ الْحَكِيْمُ ③

1. ಇಲ್ಲಿ 'ಉಮ್ಮಿ' ಎಂಬ ಪದವನ್ನು ಯಹೂದಿಗಳ ಪಾರಿಭಾಷಿಕವೆಂಬ ನೆಲೆಯಲ್ಲಿ ಪ್ರಯೋಗಿಸಲಾಗಿದೆ. ಇದರಲ್ಲೊಂದು ಲಘುವಾದ ವ್ಯಂಗ್ಯವೂ ಅಡಕವಾಗಿದೆ. ಅದೇನೆಂದರೆ ಯಾವ ಅರಬರನ್ನು ಯಹೂದಿಯರು ತಾತ್ಸಾರದಿಂದ 'ಉಮ್ಮಿ' ಎಂದು ಕರೆಯುತ್ತಾರೋ ಮತ್ತು ತಮಗಿಂತ ತುಚ್ಛರೆಂದು ಭಾವಿಸುತ್ತಾರೋ ಅವರ ಪೈಕಿಯೇ ಪ್ರಬಲನೂ ಸರ್ವಜ್ಞನೂ ಆದ ಅಲ್ಲಾಹನು ಪ್ರವಾದಿಯೊಬ್ಬನನ್ನು ಆಯ್ಕೆ ಮಾಡಿದನು. ಅವರು ಸ್ವತಃ ಪ್ರವಾದಿಯಾಗಿ ಎದ್ದು ನಿಂತಿಲ್ಲ. ಬದಲಾಗಿ ಅವರನ್ನು ನಿಸರ್ಗದ ಸಾಮ್ರಾಟನೂ, ಸರ್ವಶಕ್ತನೂ, ಯುಕ್ತಿಜ್ಞನೂ ಆದ ಅಲ್ಲಾಹನು ಎಬ್ಬಿಸಿರುವನು. ಅವನ ಶಕ್ತಿಯೊಂದಿಗೆ ಸೆಣಸಾಡಿ ಅವರು ಸ್ವತಃ ತಮಗೆ ನಷ್ಟ ಉಂಟು ಮಾಡಿಕೊಳ್ಳುವರು. ಅವನಿಗೆ ಯಾವ ನಷ್ಟವನ್ನೂ ಉಂಟು ಮಾಡಲಾರರು.

2. ಅರ್ಥಾತ್- ಮುಹಮ್ಮದ್‌ರ(ಸ) ಪ್ರವಾದಿತ್ವ ಕೇವಲ ಅರಬ್ ಜನಾಂಗಕ್ಕೆ ಮಾತ್ರ ಸೀಮಿತವಾಗಿಲ್ಲ. ಇನ್ನೂ ಸತ್ಯವಿಶ್ವಾಸಿಗಳ ಕೂಟದಲ್ಲಿ ಬಂದು ಸೇರಿರದ ಮತ್ತು ಪ್ರಳಯಕಾಲದ ತನಕ ಬರಲಿರುವ ಜಗತ್ತಿನಾದ್ಯಂತದ ಇತರ ಸಮುದಾಯ ಮತ್ತು ಜನಾಂಗಗಳಿಗೂ ಅವರು ಪ್ರವಾದಿಯಾಗಿದ್ದಾರೆ.

3. ಅರ್ಥಾತ್- ಇಂತಹ ಅನಾಗರಿಕ ಮತ್ತು ನಿರಕ್ಷರಿ ಜನಾಂಗದಲ್ಲಿ ಓರ್ವ ಮಹಾನ್ ಪ್ರವಾದಿಯನ್ನು ಸೃಷ್ಟಿಸಿರುವುದು ಕೂಡ ಅವನ

4. ಇದು ಅವನ ಅನುಗ್ರಹ. ಇದನ್ನವನು, ತಾನಿಚ್ಛಿಸಿದವರಿಗೆ ನೀಡುತ್ತಾನೆ ಮತ್ತು ಅವನು ಮಹಾ ಅನುಗ್ರಹದಾನಿ.

ذٰلِكَ فَضْلُ اللّٰهِ يُؤْتِيْهِ مَنْ يَّشَآءُ ۭ وَاللّٰهُ ذُو الْفَضْلِ الْعَظِيْمِ ④

5. 'ತೌರಾತ್'ನ ವಾಹಕರಾಗಿ ನೇಮಿಸಲ್ಪಟ್ಟರೂ ಅದರ ಭಾರವನ್ನು ಹೊರದೆ ಇದ್ದವರ ಉದಾಹರಣೆಯು ಗ್ರಂಥಗಳು ಹೇರಲ್ಪಟ್ಟ ಕತ್ತೆಯಂತಿದೆ. ಅಲ್ಲಾಹನ ಸೂಕ್ತಗಳನ್ನು ಸುಳ್ಳಾಗಿಸಿದವರ ಉಪಮೆಯೂ ಇದಕ್ಕಿಂತಲೂ ಕೆಟ್ಟದು.[4] ಇಂತಹ ಅಕ್ರಮಿಗಳಿಗೆ ಅಲ್ಲಾಹನು ಮಾರ್ಗದರ್ಶನ ಮಾಡುವುದಿಲ್ಲ.

مَثَلُ الَّذِيْنَ حُمِّلُوا التَّوْرٰىةَ ثُمَّ لَمْ يَحْمِلُوْهَا كَمَثَلِ الْحِمَارِ يَحْمِلُ اَسْفَارًا ۭ بِئْسَ مَثَلُ الْقَوْمِ الَّذِيْنَ كَذَّبُوْا بِاٰيٰتِ اللّٰهِ ۭ وَاللّٰهُ لَا يَهْدِي الْقَوْمَ الظّٰلِمِيْنَ ⑤

6. ಇವರೊಡನೆ ಹೇಳಿರಿ- "ಯಹೂದಿಗಳಾಗಿ ಬಿಟ್ಟವರೇ,[5] ಇತರೆಲ್ಲರನ್ನು ಬಿಟ್ಟು ನೀವು ಮಾತ್ರ ಅಲ್ಲಾಹನಿಗೆ ನೆಚ್ಚಿನವರೆಂಬ ದುರಭಿಮಾನ ನಿಮಗಿದ್ದರೆ[6] ಮತ್ತು ಅದರಲ್ಲಿ ನೀವು ಸತ್ಯವಂತರಾಗಿದ್ದರೆ ಮರಣವನ್ನು ಅಪೇಕ್ಷಿಸಿರಿ.

قُلْ يٰٓاَيُّهَا الَّذِيْنَ هَادُوْٓا اِنْ زَعَمْتُمْ اَنَّكُمْ اَوْلِيَآءُ لِلّٰهِ مِنْ دُوْنِ النَّاسِ فَتَمَنَّوُا الْمَوْتَ اِنْ كُنْتُمْ صٰدِقِيْنَ ⑥

7. ಆದರೆ ತಾವು ಮಾಡಿರುವಂತಹ ದುಷ್ಕೃತ್ಯಗಳ ಕಾರಣದಿಂದಾಗಿ ಇವರು ಎಷ್ಟು ಮಾತ್ರಕ್ಕೂ ಅದನ್ನು ಅಪೇಕ್ಷಿಸಲಾರರು ಮತ್ತು ಅಲ್ಲಾಹನು ಈ ಅಕ್ರಮಿಗಳನ್ನು ಚೆನ್ನಾಗಿ ಬಲ್ಲನು."

وَلَا يَتَمَنَّوْنَهٗٓ اَبَدًۢا بِمَا قَدَّمَتْ اَيْدِيْهِمْ ۭ وَاللّٰهُ عَلِيْمٌۢ بِالظّٰلِمِيْنَ ⑦

8. ಇವರೊಡನೆ ಹೇಳಿರಿ- "ನೀವು ಯಾವ ಮರಣದಿಂದ ಪಲಾಯನ

قُلْ اِنَّ الْمَوْتَ الَّذِيْ تَفِرُّوْنَ مِنْهُ

ಮಹಿಮೆ ಮತ್ತು ಯುಕ್ತಿಯ ಪ್ರತೀಕವೇ ಆಗಿದೆ. ಅವರೆಂತಹ ಪ್ರವಾದಿಯಾಗಿದ್ದಾರೆಂದರೆ ಅವರ ಬೋಧನೆಗಳು ಕ್ರಾಂತಿಕಾರಿಯಾಗಿವೆ. ಅದು ವಿಶ್ವಮಾನ್ಯವಾದ ಶಾಶ್ವತ ಮೌಲ್ಯಗಳನ್ನು ಹೊಂದಿದೆ. ಅದರ ಆಧಾರದಲ್ಲಿ ಸಕಲ ಮಾನವಕುಲ ಒಂದು ಸಮುದಾಯವಾಗಿ ಮಾರ್ಪಡಬಹುದಾಗಿದೆ ಮತ್ತು ಆ ತತ್ವಗಳಿಂದ ಸದಾ ಕಾಲ ಮಾರ್ಗದರ್ಶನ ಪಡೆಯುತ್ತಿರಬಹುದಾಗಿದೆ.

4. ಅರ್ಥಾತ್- ಅವರ ಪರಿಸ್ಥಿತಿ ಕತ್ತೆಗಿಂತಲೂ ಕೀಳಾಗಿದೆ. ಅದಕ್ಕೆ ಬುದ್ಧಿ-ವಿವೇಕಗಳೆಂಬುದಿಲ್ಲ. ಆದ್ದರಿಂದ ಅದು ಅಸಹಾಯಕ. ಆದರೆ ಇವರಿಗೆ ತಿಳುವಳಿಕೆ ಇದೆ. ತೌರಾತನ್ನು ಇವರು ಸ್ವತಃ ಓದುತ್ತಾರೆ ಮತ್ತು ಇತರರಿಗೂ ಓದಿಸುತ್ತಾರೆ. ಅದರ ಅರ್ಥದ ಬಗ್ಗೆಯೂ ಇವರು ಅಜ್ಞರಲ್ಲ. ಆದರೆ ಇವರು ಬೇಕಂತಲೇ ಅದರ ಆದೇಶಗಳನ್ನು ಉಲ್ಲಂಘಿಸುತ್ತಿದ್ದಾರೆ. ತೌರಾತ್‌ನ ಪ್ರಕಾರ ಸಂಪೂರ್ಣವಾಗಿ ಸತ್ಯದಲ್ಲಿರುವ ಪ್ರವಾದಿಯನ್ನು ನಂಬಲು ಇವರು ಉದ್ದೇಶಪೂರ್ವಕ ನಿರಾಕರಿಸುತ್ತಿದ್ದಾರೆ. ಇವರು ಅಜ್ಞಾನದಿಂದಾಗಿ ತಪ್ಪು ಮಾಡುತ್ತಿಲ್ಲ, ಬದಲಾಗಿ ತಿಳಿದಿದ್ದರೂ ಅಲ್ಲಾಹನ ಸೂಕ್ತಗಳನ್ನು ಸುಳ್ಳಾಗಿಸುತ್ತಿರುವ ಅಪರಾಧಿಗಳಾಗಿದ್ದಾರೆ.

5. ಇಲ್ಲಿ, "ಓ ಯಹೂದಿಯರೇ" ಎನ್ನುವ ಬದಲು "ಯಹೂದಿಯಾಗಿ ಮಾರ್ಪಟ್ಟವರೇ" ಅಥವಾ "ಯಹೂದಿತ್ವವನ್ನು ಸ್ವೀಕರಿಸಿಕೊಂಡವರೇ" ಎಂದು ಹೇಳಲಾಗಿರುವುದು ಗಮನಾರ್ಹ. ಮೂಸಾ(ಅ) ಅಥವಾ ಅವರಿಗಿಂತ ಮೊದಲಿನ ಪ್ರವಾದಿಗಳು ತಂದ ಮೂಲ ಧರ್ಮ ಇಸ್ಲಾಮ್ ಆಗಿದ್ದುದೇ ಇದಕ್ಕೆ ಕಾರಣ. ಆ ಪ್ರವಾದಿಗಳ ಪೈಕಿ ಯಾರೂ ಯಹೂದಿಯರಾಗಿರಲಿಲ್ಲ. ಅವರ ಕಾಲದಲ್ಲಿ ಯಹೂದಿತ್ವ ಹುಟ್ಟಿಕೊಂಡಿರಲೂ ಇಲ್ಲ. ಈ ಧರ್ಮ ಈ ಹೆಸರಿನೊಂದಿಗೆ ಹುಟ್ಟಿಕೊಂಡದ್ದು ಬಹಳ ನಂತರದ ಬೆಳವಣಿಗೆಯಾಗಿದೆ.

6. ಅರಬ್‌ನ ಯಹೂದಿಯರು ತಮ್ಮ ಜನಸಂಖ್ಯೆ ಮತ್ತು ಶಕ್ತಿಯಲ್ಲಿ ಮುಸ್ಲಿಮರಿಗಿಂತ ಕಡಿಮೆಯಿರಲಿಲ್ಲ. ಸಾಧನಾನುಕೂಲತೆಯಲ್ಲೂ ಅವರು ಬಹಳ ಮುಂದಿದ್ದರು. ಆದರೆ ಈ ಸ್ಪರ್ಧೆಯಲ್ಲೂ ಮುಸ್ಲಿಮರು ಪ್ರಬಲರು, ಯಹೂದಿಯರು ಅಧೀನರೂ ಆಗಿದ್ದರು. ಇದಕ್ಕೆ ಕಾರಣ, ಮುಸ್ಲಿಮರು ಮರಣದ ಬಗ್ಗೆ ಅಂಜಿಕೆಯ ಬದಲು ಅಮಿತಾಸಕ್ತಿ ಹೊಂದಿದ್ದರು. ಜೀವದ ಹಂಗು ತೊರೆದು ಅವರು ಯುದ್ಧ ಕಣಕ್ಕೆ ಇಳಿಯುತ್ತಿದ್ದರು. ಇದಕ್ಕೆ ಪ್ರತಿಯಾಗಿ ಯಹೂದಿಯರು ಯಾವ ಮಾರ್ಗದಲ್ಲೂ ಪ್ರಾಣ ತೆರಲು ಸಿದ್ಧರಿರಲಿಲ್ಲ. ಅದು ದೇವಮಾರ್ಗವಿರಲಿ, ಜನಾಂಗದ ಮಾರ್ಗವಿರಲಿ ಅಥವಾ ತಮ್ಮ ಸೊತ್ತು ವಿತ್ತಗಳ ರಕ್ಷಣೆಯ ಮಾರ್ಗವೇ ಆಗಿರಲಿ. ಅವರಿಗೆ ಬೇಕಾಗಿದ್ದುದು ಜೀವನ ಮಾತ್ರವೇ ಆಗಿತ್ತು. ಅದು ಎಂತಹ ಜೀವನವಾಗಿದ್ದರೂ ಸರಿ. ಈ ಕಾರಣದಿಂದಲೇ ಅವರು ಹೇಡಿಗಳಾಗಿ ಮಾರ್ಪಟ್ಟಿದ್ದರು.

ಮಾಡುತ್ತಿರುವಿರೋ ಅದು ನಿಮಗೆ ಬಂದೇ ತೀರುವುದು. ಅನಂತರ ನೀವು ಪ್ರತ್ಯಕ್ಷ ಪರೋಕ್ಷಗಳನ್ನು ಬಲ್ಲವನಾಗಿರುವವನ ಮುಂದೆ ಹಾಜರುಗೊಳಿಸಲ್ಪಡುವಿರಿ. ನೀವು ಏನೇನು ಮಾಡುತ್ತಿದ್ದಿರೆಂಬುದನ್ನು ಅವನು ಆಗ ನಿಮಗೆ ತಿಳಿಸುವನು."

فَإِنَّهُ مُلَاقِيكُمْ ثُمَّ تُرَدُّونَ إِلَىٰ عَالِمِ الْغَيْبِ وَالشَّهَادَةِ فَيُنَبِّئُكُمْ بِمَا كُنْتُمْ تَعْمَلُونَ ﴿٨﴾ ع

9. ಸತ್ಯವಿಶ್ವಾಸಿಗಳೇ, ಶುಕ್ರವಾರ ದಿನ ನಮಾಝಿಗಾಗಿ ಕರೆಯಲಾದಾಗ ಅಲ್ಲಾಹನ 'ಸ್ಮರಣೆಯ' ಕಡೆಗೆ ಧಾವಿಸಿರಿ ಮತ್ತು ಕ್ರಯ-ವಿಕ್ರಯಗಳನ್ನು ಬಿಟ್ಟುಬಿಡಿರಿ.[7] ನೀವು ಅರಿತವರಾಗಿದ್ದರೆ ಇದು ನಿಮಗೆ ಅತ್ಯುತ್ತಮವಾಗಿದೆ.

يَا أَيُّهَا الَّذِينَ آمَنُوا إِذَا نُودِيَ لِلصَّلَاةِ مِنْ يَوْمِ الْجُمُعَةِ فَاسْعَوْا إِلَىٰ ذِكْرِ اللَّهِ وَذَرُوا الْبَيْعَ ۚ ذَٰلِكُمْ خَيْرٌ لَكُمْ إِنْ كُنْتُمْ تَعْلَمُونَ ﴿٩﴾

10. ನಮಾಝ್ ಮುಗಿದ ಬಳಿಕ ಭೂಮಿಯ ಮೇಲೆ ಚದುರಿ ಬಿಡಿರಿ ಮತ್ತು ಅಲ್ಲಾಹನ ಅನುಗ್ರಹವನ್ನರಸಿರಿ.[8] ಅಲ್ಲಾಹನನ್ನು ಅತ್ಯಧಿಕ ಸ್ಮರಿಸುತ್ತಲಿರಿ. ನಿಮಗೆ ಯಶಸ್ಸು ಪ್ರಾಪ್ತವಾಗಲೂಬಹುದು.[9]

فَإِذَا قُضِيَتِ الصَّلَاةُ فَانْتَشِرُوا فِي الْأَرْضِ وَابْتَغُوا مِنْ فَضْلِ اللَّهِ وَاذْكُرُوا اللَّهَ كَثِيرًا لَعَلَّكُمْ تُفْلِحُونَ ﴿١٠﴾

11. ಅವರು ವ್ಯಾಪಾರ ಮತ್ತು ಮನರಂಜನೆ ನಡೆಯುತ್ತಿರುವುದನ್ನು ಕಂಡೊಡನೆ ಅದರೆಡೆಗೆ ಧಾವಿಸಿಹೋದರು ಮತ್ತು ನಿಮ್ಮನ್ನು ನಿಂತಲ್ಲೇ ಬಿಟ್ಟುಬಿಟ್ಟರು.[10] ಇವರೊಡನೆ ಹೇಳಿರಿ; ಅಲ್ಲಾಹನ

وَإِذَا رَأَوْا تِجَارَةً أَوْ لَهْوًا انْفَضُّوا إِلَيْهَا وَتَرَكُوكَ قَائِمًا ۚ قُلْ مَا عِنْدَ

---

7. ಈ ಆಜ್ಞೆಯಲ್ಲಿ 'ದಿಕ್ರ್' ಎಂದರೆ ಖುತ್ಬಾ (ಪ್ರವಚನ) ಆಗಿದೆ. ಏಕೆಂದರೆ ಅದಾನಿನ ನಂತರ ಪ್ರವಾದಿವರ್ಯರು(ಸ) ಮಾಡುತ್ತಿದ್ದ ಮೊದಲ ಕೆಲಸ ನಮಾಝ್ ಆಗಿರಲಿಲ್ಲ, ಖುತ್ಬಾ ಆಗಿತ್ತು. ನಮಾಝನ್ನು ಅವರು ಸದಾ ಖುತ್ಬಾದ ನಂತರವೇ ನಿರ್ವಹಿಸುತ್ತಿದ್ದರು. 'ಅಲ್ಲಾಹನ ದಿಕ್ರ್‌ನೆಡೆಗೆ ಧಾವಿಸಿರಿ' ಎಂದರೆ ಓಡೋಡಿ ಬನ್ನಿರಿ ಎಂದಲ್ಲ. ಆದಷ್ಟು ಬೇಗ ಅಲ್ಲಿಗೆ ತಲಪಲು ಪ್ರಯತ್ನಿಸಿರಿ ಎಂದಾಗಿದೆ. 'ಕ್ರಯ ವಿಕ್ರಯಗಳನ್ನು ಬಿಟ್ಟು ಬಿಡಿರಿ' ಎಂದರೆ ವ್ಯಾಪಾರ-ವ್ಯವಹಾರಗಳನ್ನು ನಿಲ್ಲಿಸಿ ಬಿಡುವುದು ಮಾತ್ರವಲ್ಲ, ಬದಲಾಗಿ ನಮಾಝ್‌ಗೆ ಹೋಗುವ ಚಿಂತೆ ಮತ್ತು ಸಿದ್ಧತೆಯಲ್ಲದೆ ಬೇರೆಲ್ಲ ಕೆಲಸ ಕಾರ್ಯಗಳನ್ನು ಬಿಟ್ಟು ಬಿಡಿರಿ ಎಂದಾಗಿದೆ. ಜುಮ್‌ಆದ ಅದಾನಿನ ನಂತರ ಎಲ್ಲಾ ರೀತಿಯ ವ್ಯಾಪಾರ-ವ್ಯವಹಾರಗಳು ನಿಷಿದ್ಧವೆಂಬ ಬಗ್ಗೆ ಇಸ್ಲಾಮೀ ಕರ್ಮಶಾಸ್ತ್ರಜ್ಞರಿಗೆ ಒಮ್ಮತಾಭಿಪ್ರಾಯವಿದೆ. ಆದರೆ ಹದೀಸ್‌ನಲ್ಲಿ ಮಕ್ಕಳು, ಮಹಿಳೆಯರು, ಗುಲಾಮರು, ರೋಗಿಗಳು ಮತ್ತು ಯಾತ್ರಿಕರಿಗೆ ಈ ಕರ್ತವ್ಯದಿಂದ ವಿನಾಯಿತಿ ನೀಡಲಾಗಿದೆ.
8. ಜುಮ್‌ಆ ನಮಾಝ್‌ನ ನಂತರ ಭೂಮಿಯಲ್ಲಿ ಹರಡಿ ಜೀವನಾಧಾರ ಹುಡುಕುವ ಚಟುವಟಿಕೆಯಲ್ಲಿ ನಿರತವಾಗುವುದು ಅವಶ್ಯಕ ಎಂದು ಇದರ ಅರ್ಥವಲ್ಲ. ಬದಲಾಗಿ ಅನುಮತಿಯ ರೂಪದಲ್ಲಿ ಈ ಆಜ್ಞೆ ಕೊಡಲಾಗಿದೆ. ಶುಕ್ರವಾರದ ಅದಾನ್ ಕೇಳಿದ ತಕ್ಷಣ ವ್ಯಾಪಾರ ವಹಿವಾಟುಗಳನ್ನು ತೊರೆಯುವ ಆಜ್ಞೆ ನೀಡಲಾಗಿತ್ತಾದ್ದರಿಂದ, ನಮಾಝ್ ಮುಗಿದ ತಕ್ಷಣ ನಿಮಗೆ ಚದುರಿ ಹೋಗಿ ಯಾವ ವ್ಯಾಪಾರದಲ್ಲಿ ಬೇಕಾದರೂ ನಿರತನಾಗುವ ಅನುಮತಿ ಇದೆ ಎಂದು ಹೇಳಲಾಗುತ್ತಿದೆ. ಇದು ಇಹ್ರಾಮ್‌ನ ಸ್ಥಿತಿಯಲ್ಲಿ ಬೇಟೆಯಾಡುವುದರಿಂದ ತಡೆಯಲಾದ ನಂತರ 'ನೀವು ಇಹ್ರಾಮ್ ಬಿಚ್ಚಿದಾಗ ಬೇಟೆಯಾಡಿರಿ' (ಸೂರಃ ಮಾಇದಃ, ಸೂಕ್ತ2) ಎಂದು ಹೇಳಿರುವಂತೆಯೇ ಇದೆ. ಇದರ ಅರ್ಥ ಬೇಟೆಯಾಡಲೇ ಬೇಕು ಎಂದಲ್ಲ, ಬದಲಾಗಿ ಬೇಕಿದ್ದರೆ ಬೇಟೆಯಾಡಬಹುದು ಎಂದಾಗಿದೆ. ಆದ್ದರಿಂದ ಈ ಸೂಕ್ತದ ಆಧಾರದಲ್ಲಿ ಇಸ್ಲಾಮಿನಲ್ಲಿ ಶುಕ್ರವಾರದ ರಜೆ ಎಂಬುದಿಲ್ಲ ಎಂದು ವಾದಿಸುವವರ ಆಧಾರ ಸರಿಯಲ್ಲ. ವಾರಕ್ಕೊಂದು ರಜೆ ಆಚರಿಸಬೇಕಿದ್ದರೆ ಯಹೂದಿಯರು ಶನಿವಾರದಂದು ಮತ್ತು ಕ್ರೈಸ್ತರು ಭಾನುವಾರದಂದು ಆಚರಿಸುವಂತೆ ಮುಸ್ಲಿಮರು ಶುಕ್ರವಾರದಂದೇ ಆಚರಿಸಬೇಕು.
9. ಇಲ್ಲಿ ಇಂತಹ ಪದ ಬಳಕೆ ಪ್ರಯೋಗಿಸಿರುವುದರ ಅರ್ಥ ಅಲ್ಲಾಹನಿಗೆ ಆ ಬಗ್ಗೆ ಸಂಶಯವಿದೆಯೆಂದಲ್ಲ (ಶಾಂತಂ ಪಾಪಂ) ಬದಲಾಗಿ ಇದು ರಾಜಠೀವಿಯಿಂದ ಕೂಡಿದ ಮಾತಿನ ವೈಖರಿಯಾಗಿದೆ. ಇದು, ದಯಾಳುವಾದ ಯಜಮಾನನೊಬ್ಬ ತನ್ನ ದಾಸನೊಡನೆ, "ನೀನು ಇಂತಿಂತಹ ಕೆಲಸ ಮಾಡು. ನಿನಗೆ ಭಡ್ತಿ ಪ್ರಾಪ್ತಿಯಾಗಬಹುದು" ಎಂದು ಹೇಳುವಂತೆಯೇ ಆಗಿದೆ. ಇದರಲ್ಲೊಂದು ಲಘುವಾದ ವಾಗ್ದಾನ ಅಡಕವಾಗಿರುತ್ತದೆ. ಅದರ ಆಸೆಯಲ್ಲಿ ಸೇವಕನು ಆ ಕೆಲಸವನ್ನು ಮನಃಪೂರ್ವಕವಾಗಿ ಮತ್ತು ಆಸಕ್ತಿಯಿಂದ ನಿಭಾಯಿಸುತ್ತಾನೆ.
10. ಇದು ಮದೀನಾದ ಆರಂಭ ಕಾಲದ ಘಟನೆಯಾಗಿತ್ತು. ಜುಮ್‌ಆ ನಮಾಝಿನ ಸಮಯಕ್ಕೆ ಸರಿಯಾಗಿ ಸಿರಿಯಾದಿಂದ ವ್ಯಾಪಾರಿ

اللهِ خَيْرٌ مِّنَ اللَّهْوِ وَمِنَ التِّجَارَةِ ۚ
وَاللَّهُ خَيْرُ الرَّازِقِينَ ⑪ ع

ಬಳಿ ಏನಿದೆಯೋ ಅದು ವ್ಯಾಪಾರ ಮತ್ತು ಮನರಂಜನೆಗಿಂತ ಉತ್ತಮವಾಗಿದೆ[11] ಮತ್ತು ಅಲ್ಲಾಹನು ಅತ್ಯುತ್ತಮ ಅನ್ನದಾತನಾಗಿದ್ದಾನೆ.[12]

ತಂಡವೊಂದು ಆಗಮಿಸಿತು. ತಮ್ಮ ಆಗಮನದ ಸುದ್ದಿ ಜನರಿಗೆ ತಿಳಿಯಲೆಂದು ಅವರು ಡೋಲು ನಗಾರಿಗಳನ್ನು ಬಾರಿಸತೊಡಗಿದರು. ಪ್ರವಾದಿವರ್ಯರು(ಸ) ಆ ಸಂದರ್ಭದಲ್ಲಿ ಪ್ರವಚನ ನೀಡುತ್ತಿದ್ದರು. ಡೋಲು ನಗಾರಿಗಳ ಶಬ್ದ ಕೇಳಿ ಜನರು ತಳಮಳಗೊಂಡರು ಮತ್ತು ಹನ್ನೆರಡು ಜನರನ್ನು ಬಿಟ್ಟರೆ ಉಳಿದವರೆಲ್ಲರೂ ಯಾತ್ರಾ ತಂಡದೆಡೆಗೆ ಧಾವಿಸಿದರು.

11. ಈ ಸೂಕ್ತದ ಮೂಲಕ ಪ್ರವಾದಿವರ್ಯರ(ಸ) ಸಂಗಾತಿಗಳಿಂದ ಸಂಭವಿಸಿ ಹೋದ ತಪ್ಪು ಯಾವ ಮಟ್ಟದ್ದಾಗಿತ್ತೆಂದು ವ್ಯಕ್ತವಾಗುತ್ತದೆ. ವಿಶ್ವಾಸದ ಕೊರತೆ ಮತ್ತು ಉದ್ದೇಶಪೂರ್ವಕವಾಗಿ ಲೋಕಕ್ಕೆ ಪರಲೋಕಕ್ಕಿಂತ ಪ್ರಾಶಸ್ತ್ಯ ಕೊಡುವ ಪ್ರವೃತ್ತಿ ಇದಕ್ಕೆ ಕಾರಣವಾಗಿರಲಿಲ್ಲ. (ಶಾಂತಂ ಪಾಪಂ) ಹಾಗಿದ್ದರೆ ಅಲ್ಲಾಹನ ಕ್ರೋಧ ಮತ್ತು ಎಚ್ಚರಿಕೆಯ ಸ್ವರೂಪವೇ ಭಿನ್ನವಾಗಿರುತ್ತಿತ್ತು. ಅಂತಹ ಯಾವ ಕೆಡುಕೂ ಅಲ್ಲಿರಲಿಲ್ಲ. ಆಗಿ ಹೋದ ಘಟನೆಗೆ ತರಬೇತಿಯ ಕೊರತೆಯೇ ಕಾರಣವಾಗಿತ್ತು. ಆದ್ದರಿಂದಲೇ ಮೊದಲು ಬೋಧನಾತ್ಮಕ ಧಾಟಿಯಲ್ಲಿ ಜುಮ್ಆದ ಶಿಷ್ಟಾಚಾರಗಳನ್ನು ಕಲಿಸಲಾಗಿದೆ. ಅನಂತರ ಈ ತಪ್ಪಿನ ಬಗ್ಗೆ ಉಪದೇಶದ ಧಾಟಿಯಲ್ಲಿ ಪ್ರಸ್ತಾಪಿಸಿ, ನಮಾಝ್ ಮಾಡುವುದರಿಂದ ಅಲ್ಲಾಹನ ಬಳಿ ನಿಮಗೆ ಸಿಗುವಂತಹುದು ಲೋಕದ ವ್ಯಾಪಾರ ಮತ್ತು ಆಟ-ವಿನೋದಗಳಿಗಿಂತ ಎಷ್ಟೋ ಉತ್ತಮವಾದುದು ಎಂದು ಹೇಳಲಾಗಿದೆ.

12. ಅರ್ಥಾತ್- ತಾತ್ಕಾಲಿಕವಾಗಿಯಾದರೂ ಈ ಲೋಕದಲ್ಲಿ ಜೀವನಾಧಾರಗಳನ್ನು ಒದಗಿಸುವ ಮಾಧ್ಯಮಗಳಾಗಿ ಬಿಡುವ ಎಲ್ಲಾ ಅನ್ನದಾತರಿಗಿಂತಲೂ ಮಿಗಿಲಾದ ಅನ್ನದಾತ ಅಲ್ಲಾಹನಾಗಿದ್ದಾನೆ.